	ಸಹಾಯಕ ಇಂಜಿನಿಯರ್	ಕಿರಿಯ ಇಂಜಿನಿಯರ್	ಒಟ್ಟು
ಕಾವೇರಿ ಜಲಾನಯನ ಏತ ನೀರಾವರಿ ನಿಗಮ, ಮೈಸೂರು	54	21	75
ಕೃಷ್ಣ ಜಲಾನಯನ ಏತ ನೀರಾವರಿ ನಿಗಮ,	49	21	70
ಒಟ್ಟು	**103**	**42**	**145**

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ನದಿಗೆ ಬ್ಯಾರೇಜ್ ನಿರ್ಮಾಣದ ಬಗ್ಗೆ

1338 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು), ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಕುಮದ್ವತಿ ನದಿಗೆ 1) ಯಲಿವಾಳ 2) ರಟ್ಟಿಹಳ್ಳಿ 3) ಕುಡಪಲಿಗಳಲ್ಲಿ ಬ್ಯಾರೇಜ್ಗಳನ್ನು ಕಟ್ಟುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ:

ಆ) ಇದ್ದಲ್ಲಿ ಸದರಿ ಮೂರು ಬ್ಯಾರೇಜ್ ಕಟ್ಟಲು ತಗಲುವ ವೆಚ್ಚ ಎಷ್ಟು.

ಇ) ಸರ್ಕಾರ ಕನಿಷ್ಟ ಪಕ್ಷ ಅತಿ ಅವಶ್ಯವಿರುವ ರಟ್ಟಿಹಳ್ಳಿ ಬ್ಯಾರೇಜ್ನಾದರೂ 1991-92ನೇ ಸಾಲಿನ ಆಯವ್ಯಯದಲ್ಲಿ ಸೇರಿಸಿ ಕಾರ್ಯಗತಗೊಳಿಸಲು ನಿರ್ಧರಿಸಿದೆಯೆ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನೀತಿ ಹಾಗೂ ಕಾರ್ಯಕ್ರಮ ಏನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ರಟ್ಟಿಹಳ್ಳಿ ಮತ್ತು ಕುಡುಪಲಿಗಳಲ್ಲಿ ಬ್ಯಾರೇಜ್ ಕಟ್ಟುವ ಪ್ರಸ್ತಾವನೆ ಇವೆ. ಆದರೆ ಯಲಿವಾಳದಲ್ಲಿ ಬ್ಯಾರೇಜ್ ಕಟ್ಟುವ ಪ್ರಸ್ತಾವನೆ ಇಲ್ಲ.

ಆ) ಪ್ರತಿ ಬ್ಯಾರೇಜಿಗೆ 35 ಲಕ್ಷ ರೂಗಳೆಂದು ಅಂದಾಜುಮಾಡಲಾಗಿದೆ.

ಇ) ರೆಟ್ಟಿಹಳ್ಳಿ ಬ್ಯಾರೇಜ್ ಕಾಮಗಾರಿಯನ್ನು ಆಯವ್ಯಯದಲ್ಲಿ ಸೇರಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಸದರಿ ಕಾಮಗಾರಿಯು ಆಯವ್ಯಯದಲ್ಲಿ ಸೇರಿದ ನಂತರ ವಿವರವಾದ ತನಿಖೆ ಕೈಗೊಂಡು ಅಂದಾಜು ಪತ್ರಿಕೆ ತಯಾರಿಸಿ ಕಾಮಗಾರಿಯು ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಸಾಧುವಾಗಿದ್ದಲ್ಲಿ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಕೆರೆ ದುರಸ್ತಿಯ ಬಗ್ಗೆ.

1337 - ಶ್ರೀ ಬಿ.ಹೆಚ್. ಬನ್ನಿಕೋಡ್ (ಪಿರೇಕೆಯಾರ್), ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಮದಗಮಸೂರು ಕೆರೆಯ ದುರಸ್ತಿ, ನೀರು ಕಾಲುವೆಗಳನ್ನು ವಿಸ್ತರಿಸುವುದು ಹಾಗೂ ನವೀಕರಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ಕಾಮಗಾರಿಗೆ ತಗಲುವ ವೆಚ್ಚರೆಷ್ಟು?

ಇ) ಇದರಿಂದಾಗಿ ನೀರಾವರಿಯಾಗಲಿರುವ ಹೆಚ್ಚುವರಿ ಪ್ರದೇಶವೆಷ್ಟು?

ಈ) ಈ ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು.